**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 461/2022 |
| ಸಿ.ಡಬ್ಲೂ | 4 |
| ಪಿ.ಡಬ್ಲೂ | 4 |

| | | |
|---|---|---|
| ಹೆಸರು | :- | ಕಲ್ಲಪ್ಪ ಕಾಂಬಳೆ |
| ತಂದೆ/ಗಂಡನ ಹೆಸರು | :- | ಗಿರಿಯಪ್ಪ |
| ವಯಸ್ಸು | :- | 51 ವರ್ಷ |
| ಉದ್ಯೋಗ | :- | ಒಕ್ಕಲುತನ |
| ವಾಸಸ್ಥಳ | :- | ಮಳಲಿ |

ಸಾಕ್ಷಿಯನ್ನು ದಿಃ20.12.2024 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ ರವರಿಂದ**

1. ನಾನು ಮುಧೋಳ ಪೊಲೀಸ ಠಾಣೆಗೆ ಬೇರೆ ಕೆಲಸಕ್ಕೆ ಹೋಗಿದ್ದು, ಆಗ ಪೊಲೀಸರು ಇಲ್ಲಿಯೇ ಹೋಗಿ ಬರೋಣ ಎಂದು ನನ್ನನ್ನು ಮತ್ತು ಚಾಸಾ-5 ರವರನ್ನು ವಜ್ರಮಟ್ಟಿ ರಸ್ತೆಯಲ್ಲಿ ಇರುವ ಕೆನಾಲ ಕಡೆಗೆ ಹೋಗಿ ಛಾಯಾಚಿತ್ರ ತೆಗೆಸಿಕೊಂಡರು. ಆಗ ನಮ್ಮೊಂದಿಗೆ ಆರೋಪಿತರು ಹಾಜರ ಇದ್ದರು. ವಸ್ತುಗಳು ಇದ್ದು, ಅವುಗಳ ಕಡೆಗೆ ಬೆರಳು ಮಾಡಲು ಹೇಳಿ ಛಾಯಾಚಿತ್ರ ತೆಗೆದುಕೊಂಡರು. ಸಾಕ್ಷಿಗೆ ಈಗ ಮುಮಾ-1 ನ್ನು ತೋರಿಸುತ್ತಿದ್ದು, ಅದನ್ನು ಅವರು ಗುರುತಿಸುವುದಿಲ್ಲ. ಸಾಕ್ಷಿಗೆ ಈಗ ನಿಪಿ-3 ಮತ್ತು ನಿಪಿ-4 ಛಾಯಾಚಿತ್ರಗಳನ್ನು ತೋರಿಸುತ್ತಿದ್ದು, ಅವುಗಳಲ್ಲಿ ತಾನು ಇದ್ದೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ಛಾಯಾಚಿತ್ರಗಳನ್ನು ಕೆನಾಲ್ ಹತ್ತಿರ ತೆಗೆದಿರುತ್ತಾರೆ. ಸಾಕ್ಷಿಗೆ ಈಗ ದಿಃ20.08.2022 ರ ಆರೋಪಿತನು ಕೃತ್ಯದಲ್ಲಿ ಉಪಯೋಗಿಸಿದ ಮಚ್ಚನ್ನು ಒಗೆದ ಸ್ದಳದ ಪಂಚನಾಮೆಯನ್ನು ತೋರಿಸುತ್ತಿದ್ದು ಅದರ ಮೇಲೆ ಇರುವ ತಮ್ಮ ಸಹಿ ಗುರುತಿಸಿದ್ದರಿಂದ, ಸದರಿ ಪಂಚನಾಮೆಯನ್ನು ನಿಪಿ-6 ಎಂದು ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವತಃ ಮುಂದುವರೆದು ನನಗೆ ಅದರಲ್ಲಿ ಏನು ಬರೆದಿಲ್ಲ ಗೊತ್ತಿಲ್ಲ, ನನ್ನ ಕೆಲಸಕ್ಕೆ ಸಹಿ ಪಡೆಯುತ್ತಿದ್ದಾರೆ ಎಂದು ಸಹಿ ಮಾಡಿದೆ ಎಂದು ಹೇಳುತ್ತಾರೆ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಣಿಸಿ ಮಾನ್ಯ ಸ.ಸ.ಅ ರವರು ಪಾಟೀ ಸವಾಲು ಮಾಡಲು ಅವಕಾಶ ಕೋರಿದ್ದರಿಂದ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು)**

**ಪಾಟೀ ಸವಾಲು ಃಸ.ಸ.ಅ ರವರಿಂದ**

1. ದಿ:20.08.2022 ರಂದು ಆರೋಪಿತನು ಚಾಸಾ-1 ರವರಿಗೆ ಮಚ್ಚನ್ನು ತೋರಿಸಿ ಬಂಗಾರದ ಆಭರಣಗಳನ್ನು ದೋಚಿದ್ದು, ಅದಕ್ಕೆ ಸಂಬಂಧಿಸಿದಂತೆ ಸದರಿ ಮಚ್ಚನ್ನು ಒಗೆದ ಝುಂಜರಕೊಪ್ಪ ಗ್ರಾಮದ ಸರ್ವೆ ನಂ.146 ರ ಜಮೀನಿನಲ್ಲಿ ಆರೋಪಿತ ಸ್ಥಳ ತೋರಿಸಿದಂತೆ ನಿಮ್ಮ ಸಮಕ್ಷಮ ಪಂಚನಾಮೆ ಬರೆದರು ಎಂದರೆ ಘಟನೆಯ ಬಗ್ಗೆ ನನಗೆ ಯಾವುದೇ ವಿಷಯ ಗೊತ್ತಿಲ್ಲ, ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದು ಸಾಕ್ಷಿ ಹೇಳುತ್ತಾರೆ. ನೀವು ಪಂಚನಾಮೆ ಓದಿ ತಿಳಿದುಕೊಂಡು ಸಹಿ ಮಾಡಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಶ್ರೀ.ಎಸ್.ಪಿ.ವಿ ವಕೀಲರಿಂದ ಆರೋಪಿ-1 ಪರವಾಗಿ**

1. ಕೇವಲ ಪೊಲೀಸರು ಹೇಳಿದಂತೆ ನೀವು ಸ್ಥಳಕ್ಕೆ ಹೋಗಿದ್ದು, ಯಾವ ಕಾರಣಕ್ಕೆ ಹೋಗುತ್ತಿದ್ದೀರಿ ಎಂದು ನಿಮಗೆ ತಿಳಿಸಿಲ್ಲ ಎಂದರೆ ಸರಿ. ಆರೋಪಿತರನ್ನು ನೋಡಿದರೆ ನೀವು ಗುರುತಿಸುವುದಿಲ್ಲ ಎಂದರೆ ಸರಿ. ನಿಮ್ಮ ಮುಂದೆ ಮಚ್ಚನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿ.

ಆರೋಪಿ-2 ಪರ ವಕೀಲರು 1 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ